ಈ ದಿನ ದಿನಾಂಕಃ 22-11-2022 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ</u>

ಪ್ರತಿವಾದಿಯ ತಂದೆ ಹೆಸರು ರಂಗಪ್ಪ, ತಾಯಿಯ ಹೆಸರು ತೊಳಸಮ್ಮ. ರಂಗಪ್ಪ ದೇವದಾಸಿ ಮಗ ಎಂದರೆ ಸರಿ. ಆಕೆಯ ಹೆಸರು ಕೆಂಚಮ್ಮ. ಸದರಿಯವರಿಗೆ ಅರಿಶಿನಘಟ್ಟದ ಸರ್ವೆ ನಂ.86/1 ರಲ್ಲಿ 2 ಎಕರೆ 35 ಗುಂಟೆ ಜಮೀನು ಇತ್ತು ಎಂದರೆ ಸರಿ. ಅದರ ಪೂರ್ವಕ್ಕೆ ಭದ್ರನಾಲೆ, ಪಶ್ಚಿಮಕ್ಕೆ ರತ್ನಮ್ಮನವರ ಜಮೀನು, ಉತ್ತರಕ್ಕೆ ಬೋವಿ ಕಾಲೋನಿ ಮತ್ತು ದಕ್ಷಿಣಕ್ಕೆ ಪಂಚಾಯಿತಿ ರಸ್ತೆಗಳು ಇರುತ್ತವೆ ಎಂದರೆ ಸರಿ. ಪ್ರತಿವಾದಿಗೆ ಹಾಲೇಶಮ್ಮ ಎಂದು ಕರೆಯುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಈ ಮೇಲೆ ಹೇಳಿದ ಚೆಕ್ಕುಬಂದಿಯ ನಡುವೆ ಇರುತ್ತದೆ ಎಂದರೆ ಸರಿ.

2. ರಂಗಪ್ಪನವರಿಗೆ ಒಬ್ಬ ಗಂಡು ಮಗ ಮೂರು ಜನ ಹೆಣ್ಣುಮಕ್ಕಳು. ಹೆಣ್ಣುಮಕ್ಕಳೆಂದರೆ ಹನುಮಮ್ಮ, ತಿಪ್ಪಮ್ಮ ಮತ್ತು ಹಾಲೇಶಮ್ಮ, ಗಂಡು ಮಗ ಬಸವರಾಜಪ್ಪ. ಬಸವರಾಜಪ್ಪ ಮರಣ ಹೊಂದಿರುತ್ತಾರೆ. ಆತನ ಹೆಂಡತಿ ಹೆಸರು ರತ್ನಮ್ಮ. ಆಕೆ ಜೀವಂತ ಇದ್ದಾರೆ. ಅವರಿಗೆ ರಂಗಮ್ಮ, ಗಿರೀಶ ಮತ್ತು ರಂಗಸ್ವಾಮಿ ಎಂಬ ಮೂರು ಜನ ಮಕ್ಕಳು. ರಂಗಸ್ವಾಮಿ ಕೂಡ ಮರಣ ಹೊಂದಿದ್ದಾರೆ ಎಂದರೆ ಸರಿ. ಆತನ ಹೆಂಡತಿ ಸಿದ್ದಮ್ಮ ಜೀವಂತ ಇದ್ದಾರೆ. ರಂಗಪ್ಪನವರ ವಾರಸುದಾರರನ್ನು ದಾವೆಯಲ್ಲಿ ಸೇರಿಸಿಲ್ಲ.

3. ರಂಗಪ್ಪನವರ ಆಸ್ತಿಗಳಲ್ಲಿ ಆತನ ವಾರಸುದಾರರಿಗೆ ಹಕ್ಕಿರುತ್ತದೆ ಎಂದರೆ ಸರಿ. ಸರ್ವೆ ನಂ.86/1 ರಲ್ಲಿರುವ ಮನೆಗಳಲ್ಲಿ ಸಿದ್ದಮ್ಮ ಕೋಂ ರಂಗಸ್ವಾಮಿ, ರುದ್ರಪ್ಪ ಬಿನ್ ಹಾಲಪ್ಪ, ತಿಮ್ಮಪ್ಪ ತಾಯಿ ನಿಂಗಮ್ಮ, ಗಂಗಾಧರಪ್ಪ ಬಿನ್ ಹಾಲಪ್ಪ, ಹಾಲಮ್ಮ ಕೋಂ ಸಿದ್ದೇಶಪ್ಪ, ಚಂದ್ರಮ್ಮ ಕೋಂ ದೇವೆಂದ್ರಪ್ಪ, ಕರಿಬಸಮ್ಮ ಕೋಂ ಸಿದ್ದಪ್ಪ ವಾಸವಾಗಿದ್ದಾರೆ ಎಂದರೆ ಸರಿ. ಸದರಿ ಆಸ್ತಿ ಇವತ್ತಿಗೂ ಕಂದಾಯ ಭೂಮಿಯಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು ಪಂಚಾಯಿತಿಯವರು ಈಗ ಸ್ವಾದೀನಕ್ಕೆ ಪಡೆದಿದ್ದಾರೆ ಮತ್ತು ಪಂಚಾಯಿತಿ ಆಸ್ತಿ ಸಂಖ್ಯೆಗಳನ್ನು ನೀಡಿದ್ದಾರೆ.

4. ಸದರಿ ಜಮೀನಿನ ಪಹಣಿಗಳನ್ನು ನಾನು ನೋಡಿದ್ದೇನೆ. ಸಾಕ್ಷಿ ಸರ್ವೆ ನಂ.86/1 ರ ಪಹಣಿಗಳನ್ನು ನೋಡಿ ಗುರುತಿಸ್ದಿದರಿಂದ <u>**ನಿಡಿ 1**</u> ಎಂದು ಗುರುತಿಸಲಾಯಿತು. ನಾವು ನಿಂಗಾಪುರ ಗ್ರಾಮದಲ್ಲಿ 2009 ರಿಂದ ವಾಸವಾಗಿರುತ್ತೇವೆ. ಅಲ್ಲಿ ನಮಗೆ ಸ್ವಂತ ಮನೆ ಇರುತ್ತದೆ ಎಂದರೆ ಸರಿಯಲ್ಲ. ನಾವು ನಮ್ಮ ಮಾವನವರ ಮನೆಯಲ್ಲಿ ವಾಸವಾಗಿರುತ್ತೇವೆ. ಅದು ನನ್ನ ಹೆಂಡತಿಯ ಹೆಸರಿನಲ್ಲಿದೆ. ನಾವು ಅರಿಶಿನಘಟ್ಟದಲ್ಲಿರುವ ಜಮೀನುಗಳನ್ನು ಓಂಕಾರ ಮೂರ್ತಿಯವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಇನ್ನು 1 ಎಕರೆ ಉಳಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

5. ನಿಂಗಾಪುರದಲ್ಲಿನ ರಂಗಪ್ಪನವರು ನನ್ನ ಮಾವನ ಸಹೋದರ. ಸದರಿಯವರು ನಮಗೆ 2 ½ ಎಕರೆ ಜಮೀನನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾವು ಅಲ್ಲಿ ಯಾವುದೆ ಜಮೀನನ್ನು ಸಾಗು ಮಾಡುತ್ತಿಲ್ಲ. ನಮ್ಮ ಹೆಸರಿಗೆ ಆದ ಖಾತೆ ದಾಖಲೆಗಳ ಬಗ್ಗೆ ಯಾವುದೆ ಠರಾವನ್ನು ಹಾಜರುಪಡಿಸಿಲ್ಲ. ಆದರೆ ಕಂದಾಯ ಪಾವತಿ ಮತ್ತು ವಿದ್ಯುಚ್ಚಕ್ತಿ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ.

6. ನಿಪಿ 1 ರಿಂದ 12 ರಲ್ಲಿ ಆಸ್ತಿಯ ಚೆಕ್ಕುಬಂದಿ ನಮೂದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ 1 ರಿಂದ 12 ರ ದಾಖಲೆಗಳಲ್ಲಿ ಆಸ್ತಿಯ ಅಳತೆ ಕೂಡ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನಿಪಿ 1 ರಿಂದ 12 ದಾಖಲೆಗಳನ್ನು ಪರಿಶೀಲಿಸಿ ಅಳತೆಯ ಬಗ್ಗೆ ಹೇಳುವಂತೆ ಕೇಳಿದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ದಾಖಲೆಗಳು ಹಂಗಾಮಿ ಕಂದಾಯದ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ನಿಪಿ 1 ರಿಂದ 12 ರಲ್ಲಿ ವಿದ್ಯುಚ್ಚಕ್ತಿ ರಶೀದಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 12 ರಲ್ಲಿ ನಮ್ಮ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 12 ನಮಗೆ ಸಂಬಂದಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯಲ್ಲಿರುವ ನಮ್ಮ ಮಾಲೀಕತ್ವದ ಬಗ್ಗೆ ಯಾವುದೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಇದ್ದಾಗ ನಾವು ಆಸ್ತಿಯ ಭಾಗವನ್ನು ಮಾಡಿಕೊಂಡಿದ್ದೇವೆ ಆದರೆ ದಾಖಲೆಗಳು ಇರುವುದಿಲ್ಲ. ದಾವಾ ಆಸ್ತಿ ಪ್ರತಿವಾದಿಯ ತಂದೆಯ ಆಸ್ತಿಯಾಗಿದ್ದು ಅದರಲ್ಲಿ ನಮಗೆ ಯಾವುದೆ ಹಕ್ಕಿಲ್ಲ ಎಂದರೆ ಸರಿಯಲ್ಲ. ನಮ್ಮ ನೋಟಿಸ್ ಗೆ ಸಹ ದಾವಾ ಸ್ವತ್ತು ತಮ್ಮದೆ ಎಂದು ಉತ್ತರ ನೀಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯ ಆಸ್ತಿಯನ್ನು ನಮ್ಮ ಆಸ್ತಿ ಎಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪಂಚಾಯಿತಿಯವರ ಜೊತೆ

ಶಾಮೀಲ್ ಆಗಿ ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವುದೆ ಹಕ್ಕು ಇರುವುದ್ಲಿ ಎಂದರೆ ಸರಿಯಲ್ಲ.

8. ಸರ್ವೆ ನಂ.86/1 ನೇ ಆಸ್ತಿಯನ್ನು ಸ್ವಾಧೀನ ಪಡಿಸಿಕೊಂಡು ನಿವೇಶನಗಳನ್ನು ಮಾಡಿದ ಬಗ್ಗೆ ದಾಖಲೆಗಳನ್ನು ನೀಡಿರುವುದಿಲ್ಲ. ನಿಪಿ 1 ರಿಂದ 12 ರಂತೆ ಇರುವ ದಾಖಲೆಗಳನ್ನು ಆ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ದಾವೆ ದಾಖಲಿಸುವ ಕಾಲಕ್ಕೆ ಪಂಚಾಯಿತಿಯವರು ನನಗೆ ಇ-ಸ್ವತ್ತಗಾಲೀ ಅಥವಾ ಹಕ್ಕುಪತ್ರವನ್ನಾಗಲೀ ನೀಡಿರುವುದಿಲ್ಲ. ವಾದಿಗೆ ಸೇರಿದ ಆಸ್ತಿಯನ್ನು ನನ್ನದೆಂದು ಸಾದಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು**)**

ಓ**.**ಹೇ**.**ಕೇ**.** ಸರಿ ಇದೆ**.**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ. ಚನ್ನಗಿರಿ.